# ಅಂತರ್ಜಲ ಮತ್ತು ಅಂತರಂಗದ ದೋಣಿ

ಕೃಷಿ ನೀರಾವರಿಗೆ ಸಂಬಂಧಿಸಿದ ಹೊಸ ಆವಿಷ್ಕಾರಗಳ ಬಗ್ಗೆ ಗಮನಹರಿಸುವುದು, ಜಲಮೂಲಗಳನ್ನು ಪುನಶ್ಚೇತನಗೊಳಿಸುವುದು ಹಾಗೂ ಅಂತರ್ಜಲದ ಅತಿ ಬಳಕೆಗೆ ಕಡಿವಾಣ – ಕಸ್ತೂರಿರಂಗನ್ ನೀಡಿರುವ ಈ ಸೂತ್ರಗಳನ್ನು ಪಾಲಿಸದೆ ಹೋದರೆ ಮುಂದಿನ ತಲೆಮಾರನ್ನು ಭೀಕರ ಜಲಕ್ಷಾಮಕ್ಕೆ ನಾವು ದೂಡಲಿದ್ದೇವೆ.


ಈಶ್ವರ್

ಕಳೆದ ಹತ್ತು ವರ್ಷಗಳಲ್ಲಿ ರಾಜ್ಯದಲ್ಲಿನ ಅಂತರ್ಜಲ ಮಟ್ಟ ಇದೇ ಮೊದಲ ಬಾರಿಗೆ ಗಣನೀಯ ಪ್ರಮಾಣದಲ್ಲಿ ಕುಸಿದಿದೆ ಎನ್ನುವ 'ರಾಜ್ಯ ಅಂತರ್ಜಲ ನಿರ್ದೇಶನಾಲಯ'ದ ಅಂಕಿಅಂಶಗಳು ನೀರಿನ ಸ್ಥಿತಿಗತಿ ಕುರಿತ ಎಚ್ಚರಿಕೆ ಪತ್ರದಂತಿದೆ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದ 144 ತಾಲ್ಲೂಕುಗಳಲ್ಲಿ ಅಂತರ್ಜಲದ ಮಟ್ಟ ಶೇ. 81.8ರಷ್ಟು ಕುಸಿದಿದೆ ಎನ್ನುವ ಮಾಹಿತಿ ಆತಂಕಕಾರಿಯಾದುದು. ರಾಜ್ಯದ ಕೆಲವು ಪ್ರದೇಶಗಳಲ್ಲಿ ಅತಿವೃಷ್ಟಿಯಿಂದ ಅನಾಹುತ ಸಂಭವಿಸಿದ್ದರೂ, ಮಳೆನೀರು ಸಮುದ್ರ ಸೇರಿದೆಯೇ ಹೊರತು ಭೂಮಿಯಲ್ಲಿ ಇಂಗಿರುವುದು ಕಡಿಮೆ. ಇನ್ನೊಂದೆಡೆ, ಪ್ರಸಕ್ತ ವರ್ಷ 100 ತಾಲ್ಲೂಕುಗಳು ಬರಪೀಡಿತವಾಗಿವೆ ಎಂದು ಸರ್ಕಾರವೇ ಘೋಷಿಸಿದೆ. ಬಾಗಲಕೋಟೆ, ವಿಜಯಪುರ, ಗದಗ, ಧಾರವಾಡ, ಹಾಸನ ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿರುವುದು ಆ ಜಿಲ್ಲೆಗಳಲ್ಲಿ ಅಂತರ್ಜಲದ ಕುಸಿತಕ್ಕೆ ಪ್ರಮುಖ ಕಾರಣವಾಗಿದೆ. ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಂತೂ ಎಂದಿನಂತೆ ನೀರಿನ ಮಟ್ಟ ಕುಸಿತದಲ್ಲಿ ಮುಂಚೂಣಿಯಲ್ಲೇ ಇವೆ.

ಕಳೆದ ಜನವರಿಯಲ್ಲಿ ಕೇಂದ್ರ ಅಂತರ್ಜಲ ಮಂಡಳಿ ಕೂಡ ರಾಜ್ಯದ ನೀರಿನಸೆಲೆಗಳು ಕೃಶವಾಗುತ್ತಿರುವ ಕುರಿತು ಎಚ್ಚರಿಸಿತ್ತು. ಕರ್ನಾಟಕದ ಶೇ.69ರಷ್ಟು ಬಾವಿಗಳ ಅಂತರ್ಜಲ ಕುಸಿದಿದೆ ಎಂದು ಹೇಳಿದ್ದ ಮಂಡಳಿ, ಜನಸಂಖ್ಯೆಯಲ್ಲಿನ ಹೆಚ್ಚಳ ಹಾಗೂ ಕೃಷಿಗೆ ಸಂಬಂಧಿಸಿದಂತೆ ಸ್ಪಷ್ಟವಾದ ಜಲನೀತಿ ಇಲ್ಲದಿರುವುದು ಇದಕ್ಕೆ ಕಾರಣ ಎಂದು ಅಭಿಪ್ರಾಯಪಟ್ಟಿತ್ತು. ಇದೇ ಸ್ಥಿತಿ ಮುಂದುವರಿದರೆ ರಾಜಸ್ಥಾನದ ಮರಳುಗಾಡಿಗಿಂತಲೂ ಭೀಕರವಾದ ಸ್ಥಿತಿ ಕರ್ನಾಟಕದಲ್ಲೂ ತಲೆದೋರಲಿದೆ ಎಂದೂ ವರದಿ ಹೇಳಿತ್ತು. ಕರ್ನಾಟಕ ಮಾತ್ರವಲ್ಲ – ನೆರೆಯ ರಾಜ್ಯಗಳಾದ ತಮಿಳುನಾಡು, ಕೇರಳ, ಆಂಧ್ರಪ್ರದೇಶಗಳಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಆ ರಾಜ್ಯಗಳಲ್ಲಿ ಶೇ. 70ಕ್ಕಿಂತಲೂ ಹೆಚ್ಚು ಬಾವಿಗಳ ನೀರಿನ ಮಟ್ಟ ಗಣನೀಯವಾಗಿ ಕುಸಿದಿರುವುದನ್ನು ಗುರ್ತಿಸಲಾಗಿದೆ. ಭಾರತದಲ್ಲಿ 60 ಕೋಟಿಗಿಂತಲೂ ಹೆಚ್ಚು ಜನರು ನೀರಿನ ಕೊರತೆ ಎದುರಿಸುತ್ತಿದ್ದು, 2 ಲಕ್ಷ ನಾಗರಿಕರು ಸ್ವಚ್ಛ ನೀರಿನ ಅಲಭ್ಯತೆಯಿಂದಾಗಿ ಪ್ರತಿ ವರ್ಷ ಸಾವಿಗೀಡಾಗುತ್ತಿದ್ದಾರೆ. ಜನಸಂಖ್ಯೆಯ ಪ್ರಮಾಣ ಇದೇ ಏರುಗತಿಯಲ್ಲಿದ್ದರೆ 2030ರ ವೇಳೆಗೆ ದೇಶದಲ್ಲಿನ ನೀರಿನ ಬೇಡಿಕೆಯ ಪ್ರಮಾಣ ದುಪ್ಪಟ್ಟಾಗಲಿದೆ ಎಂದು ಅಂದಾಜು ಮಾಡಲಾಗಿದೆ.

ಕರ್ನಾಟಕದಲ್ಲಿ ಅಂತರ್ಜಲ ಮಟ್ಟ ಕುಸಿಯಲಿಕ್ಕೆ ಮುಖ್ಯವಾಗಿ ಮೂರು ಕಾರಣಗಳು. ಕೊಳವೆಬಾವಿಗಳ ಮಿತಿಮೀರಿದ ಬಳಕೆ ಮೊದಲನೆಯಾದರೆ, ಕೃಷಿಗೆ ಸಂಬಂಧಿಸಿದಂತೆ ವೈಜ್ಞಾನಿಕವಾದ ಜಲನೀತಿ ಇಲ್ಲದಿರುವುದು ಎರಡನೆಯ ಕಾರಣ. ಮೂರನೆಯದು, ನೀರಿನ ಬಳಕೆ ಹಾಗೂ ಸಂರಕ್ಷಣೆ ಕುರಿತಂತೆ ಜನರಲ್ಲಿರುವ ನಿರ್ಲಕ್ಷ್ಯ.

ಕೊಳವೆಬಾವಿಗಳನ್ನು ಕೊರೆಸುವುದಕ್ಕೆ ಸಂಬಂಧಿಸಿದಂತೆ ಸ್ಪಷ್ಟನೀತಿ ಜಾರಿಯಲ್ಲಿದ್ದರೂ ಅದನ್ನು ಆಡಳಿತ ಸಂಸ್ಥೆಗಳೇ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರುತ್ತಿಲ್ಲ. ಬೆಂಗಳೂರು ಮಹಾನಗರದಲ್ಲಿಯೇ ಸಾವಿರಾರು ಅನಧಿಕೃತ ಕೊಳವೆಬಾವಿಗಳಿವೆ. ವಸತಿ ಸಮುಚ್ಚಯಗಳಂತೂ ಅಂತರ್ಜಲ ಶೋಷಣೆಯ ಪ್ರಮುಖ ಕೇಂದ್ರಗಳಾಗಿವೆ. ಕೃಷಿಗೆ ಸಂಬಂಧಿಸಿದ ಲೆಕ್ಕಾಚಾರ ನೋಡುವುದಾದರೆ, ದೇಶದ ಒಟ್ಟಾರೆ ಜಲಸಂಪನ್ಮೂಲದಲ್ಲಿ ಶೇ. 80ರಿಂದ 85ರಷ್ಟನ್ನು ವ್ಯವಸಾಯಕ್ಕೆ ಬಳಸಲಾಗುತ್ತಿದೆ. ಈ ಪ್ರಮಾಣವನ್ನು ಕನಿಷ್ಠ ಶೇ. 50ಕ್ಕೆ ಇಳಿಸದಿದ್ದರೆ ಅಪಾಯ ಕಟ್ಟಿಟ್ಟಬುತ್ತಿ ಎಂದು ಹಿರಿಯ ವಿಜ್ಞಾನಿ ಡಾ. ಕೆ. ಕಸ್ತೂರಿರಂಗನ್ ಸಂದರ್ಶನವೊಂದರಲ್ಲಿ ಎಚ್ಚರಿಸಿದ್ದಾರೆ. ಕೃಷಿ ನೀರಾವರಿಗೆ ಸಂಬಂಧಿಸಿದ ಹೊಸ ಆವಿಷ್ಕಾರಗಳ ಬಗ್ಗೆ ಗಮನಹರಿಸುವುದು, ಜಲಮೂಲಗಳನ್ನು ಪುನಶ್ಚೇತನಗೊಳಿಸುವುದು ಹಾಗೂ ಅಂತರ್ಜಲದ ಅತಿ ಬಳಕೆಗೆ ಕಡಿವಾಣ – ಕಸ್ತೂರಿರಂಗನ್ ನೀಡಿರುವ ಈ ಸೂತ್ರಗಳನ್ನು ಪಾಲಿಸದೆ ಹೋದರೆ ಮುಂದಿನ ತಲೆಮಾರನ್ನು ಭೀಕರ ಜಲಕ್ಷಾಮಕ್ಕೆ ನಾವು ದೂಡಲಿದ್ದೇವೆ.

ನೀರಿನ ಸಂರಕ್ಷಣೆಯನ್ನು ಸರ್ಕಾರದ ಹೊಣೆ ಎಂದು ಭಾವಿಸದೆ ವೈಯಕ್ತಿಕ ತುರ್ತು ಎಂದು ಭಾವಿಸುವುದು ಇಂದಿನ ಅಗತ್ಯ. ಕೆಲವು ಸಂದರ್ಭಗಳಲ್ಲಿ ನೀರಿನ ಕುರಿತ ಸಾರ್ವಜನಿಕರ ನಿರ್ಲಕ್ಷ್ಯವನ್ನು ನೋಡಿದರೆ ಕೆರೆಕಟ್ಟೆಗಳ ಜೊತೆಗೆ ಅಂತರಂಗದ ಮಾನವೀಯತೆಯೂ ಬತ್ತಿಹೋಗಿದೆಯೇನೋ ಅನ್ನಿಸುತ್ತದೆ. ಕೆಲವೆಡೆಗಳಲ್ಲಿ ಒಂದೆರಡು ಕೊಡ ನೀರಿಗೂ ತತ್ವಾರದ ಪರಿಸ್ಥಿತಿಯಿದ್ದರೆ, ಅನೇಕ ಕಡೆ ನೀರಿನ ಪೋಲು ಯಥೇಚ್ಛವಾಗಿ ನಡೆಯುತ್ತಿದೆ. ವಾಹನ, ಮನೆಯಂಗಳವನ್ನು ತೊಳೆಯುವ ಹಾಗೂ ಶೌಚಾಲಯಗಳಲ್ಲಿ ಪೋಲಾಗುವ ನೀರಿಗೆ ಮಿತಿ ಹೇರಿಕೊಂಡರೂ ಸಾಕಷ್ಟು ನೀರಿನ ಸಂರಕ್ಷಣೆ ಸಾಧ್ಯವಾಗುತ್ತದೆ. ಇದೆಲ್ಲಕ್ಕಿಂತಲೂ ಮುಖ್ಯವಾದುದು ಭೂಮಿಗೆ ನೀರುಣಿಸುವ ಕ್ರಿಯೆ. ನಮ್ಮ ಮನೆಯ ಸೂರಿನ ಮೇಲೆ ಬೀಳುವ ನೀರನ್ನು ಚರಂಡಿಯಲ್ಲಿ ಹರಿದುಹೋಗಲು ಬಿಡದೆ ಭೂಮಿಗೆ ಸೇರುವಂತೆ ಮಾಡುವುದು ಅತ್ಯಗತ್ಯ. ನಾವಿಂದು ಇಂಗಿಸುವ ಪ್ರತಿಹನಿ ನೀರು ಮುಂದಿನ ತಲೆಮಾರಿಗೆ ಕಾಪಿಡುತ್ತಿರುವ ಅಮೂಲ್ಯ ನಿಧಿ ಎನ್ನುವ ಅರಿವು ಸಾಂಕ್ರಾಮಿಕವಾಗಬೇಕು.

■ ರಘುನಾಥ ಚ.ಹ.